


500ಕ್ಕೂ ಹೆಚ್ಚು ದೈತ್ಯ ಸಿಕೋಯಾ ಮರಗಳನ್ನು ಹೊಂದಿರುವ ಮಾರಿಪೋಸಾ ಗ್ರೋವ್



ರಿಬ್ಬನ್ ಜಲಪಾತ– ವಿಶ್ವಪ್ರಸಿದ್ಧ ಎಲ್ ಕ್ಯಾಪಿಟಾನ್ ಬಂಡೆಗಳ ಪಶ್ಚಿಮಕ್ಕೆ 1612 ಅಡಿ ಎತ್ತರದಿಂದ ಧುಮುಕುವ ಈ ಜಲಪಾತವು ಒಂದೇ ಹಂತದಲ್ಲಿ ನೆಲವನ್ನು ತಲುಪುವುದಾಗಿದ್ದು ಉತ್ತರ ಅಮೆರಿಕದ ಅತ್ಯಂತ ಎತ್ತರದ ಜಲಪಾತವೆಂದು ಪರಿಗಣಿಸಲ್ಪಟ್ಟಿದೆ. ಚಳಿಗಾಲದಲ್ಲಿ ಬಿದ್ದ ಹಿಮವು ಕರಗಿ ಹರಿಯುವುದೇ ಅದರ ನೀರಿನ ಆಕರ.

ಕುದುರೆಬಾಲದ ಜಲಪಾತ (Horsetail falls)– ಎಲ್ ಕ್ಯಾಪಿಟಾನ್ ಬಂಡೆಯ ಪೂರ್ವಕ್ಕೆ ಕಾಣುವ ಈ ಜಲಪಾತವು ಕುದುರೆ ಬಾಲದಂತೆ ಮೇಲಕ್ಕೆ ಕಿರಿದಾಗಿದ್ದು ಕೆಳಗೆ ಬಂದಂತೆ ಸ್ವಲ್ಪ ಅಗಲವಾಗುತ್ತ ಇಳಿಯುತ್ತದೆ. ಚಳಿಗಾಲದ ಕೊನೆ ಮತ್ತು ಬೇಸಿಗೆಯ ಆರಂಭದ ಸಮಯದಲ್ಲಿ ಮಾತ್ರ ಸರಿಯಾಗಿ ನೋಡಲು ಸಿಗುವ ಈ ಜಲಪಾತ, ಎರಡು ಹಂತಗಳಲ್ಲಿ 2130 ಅಡಿ ಎತ್ತರದಿಂದ ಬೀಳುತ್ತದೆ. ಸೂರ್ಯಾಸ್ತದ ಸಮಯದಲ್ಲಿ ಸೂರ್ಯನ ಕಿರಣಗಳು ಬಿದ್ದು ಕೆಂಪಾಗಿ ಕಾಣುತ್ತ ಬೆಂಕಿಯ ಧಾರೆ ಇಳಿದಂತೆ ಕಾಣುವುದರಿಂದ ಅದಕ್ಕೆ ಬೆಂಕಿಯ ಧಾರೆ (Fire falls) ಎಂಬ ಹೆಸರಿದೆ.

ನೆವಡಾ ಜಲಪಾತ– ನೆವಡಾ ಜಲಪಾತವು 594 ಅಡಿ ಎತ್ತರವಿದೆ. ಮೇಲಿನ ಒಂದು ಹಂತದ ನೀರು ಇಳಿಜಾರಾಗಿರುವ ಬಂಡೆಯ ಮೇಲೆ ಬಿದ್ದು ಕೆಳಗೆ ಇಳಿಯುವುದರಿಂದ ಜಲಪಾತವು ಕೊಂಚ ಬಾಗಿದಂತೆ ಕಾಣುತ್ತದೆ. ಜಲಪಾತದ ನೆತ್ತಿಯ ಮೇಲೆ ಕೆರೆಯಂತಹ ಒಂದು ಜಲಮೂಲವಿದ್ದು, ಜನರು ಅಲ್ಲಿಗೆ ಈಜಲು ಹೋಗುತ್ತಾರೆ. ಆದರೆ ಅದು ಅಪಾಯಕಾರಿ.

ಇಲೋಹೆಟ ಜಲಪಾತ (Illilouette falls)– ಗ್ಲೇಸಿಯರ್ ಪಾಯಿಂಟ್‌ನಿಂದ ಧುಮುಕುವ ಈ ಜಲಪಾತವು 318 ಅಡಿ ಎತ್ತರವಿದೆ. ಪನೋರಮಾ ಟ್ರೇಲ್ಸ್ ಎಂಬ ಚಾರಣದ ಹಾದಿಯಿಂದ ಅದು ಅತ್ಯಂತ ಸುಂದರವಾಗಿ ಕಾಣುತ್ತದೆಯಾದರೂ ಅದು ವರ್ಷವಿಡೀ ಹರಿಯುವುದಿಲ್ಲ.

ಮಾರಿಪೋಸಾ ಗ್ರೋವ್ (Mariposa Grove) – ಸುಮಾರು 500ಕ್ಕೂ ಹೆಚ್ಚು ದೈತ್ಯ ಸಿಕೋಯಾ ಮರಗಳ ತೋಪು. ಅಲ್ಲಿರುವ ಕೆಲವು ಮರಗಳ ವಯಸ್ಸು ಸುಮಾರು 1900 ವರ್ಷಗಳಿಗೂ ಹೆಚ್ಚು ಎಂದು ಅಂದಾಜಿಸಲಾಗಿದ್ದು ಅವುಗಳಲ್ಲಿ ಒಂದು ಮರವು 210 ಅಡಿ ಎತ್ತರ, 92 ಅಡಿ ಸುತ್ತಳತೆ ಹೊಂದಿದೆ. ಹಿಂದೆ ಯಾವಾಗಲೋ ಇನ್ನೊಂದು ಮರವನ್ನು ಕೆಡವದೆ ಕೊರೆದು ಸುರಂಗದಂತೆ ಮಾಡಿದ್ದರು.

ಆ ಮರಗಳು ವಿಶ್ವದ ಅತ್ಯಂತ ದೊಡ್ಡ 30 ಮರಗಳ ಪಟ್ಟಿಯಲ್ಲಿ ಸೇರಿವೆ ಎನ್ನಲಾಗಿದೆ. ದೈತ್ಯ ಮರಗಳ ನಡುವೆ ನಡೆದಾಡುತ್ತಿದ್ದರೆ ಪ್ರಕೃತಿ ಎದುರು ಮಾನವನ ಕುಬ್ಜತೆಯ ಅರಿವಾಗುತ್ತದೆ.

ಮೇಲೆ ಹೇಳಿದ ಜಲಪಾತಗಳು ಹಾಗೂ ಹೆಬ್ಬಂಡೆಗಳು ಪ್ರಮುಖವಾದುವು. ಅವುಗಳನ್ನುಳಿದು ಇನ್ನೂ ಅನೇಕ ಜಾಗಗಳು ಅತ್ಯಂತ ಸುಂದರವಾಗಿದ್ದು ವೀಕ್ಷಣೆಗೆ ಯೋಗ್ಯವಾಗಿವೆ. ಒಟ್ಟಿನಲ್ಲಿ ಯೋಸೆಮಿಟಿ ಕುಟುಂಬ ಸಮೇತ ಪ್ರವಾಸಕ್ಕೆ ಹೇಳಿಮಾಡಿಸಿದ ತಾಣ. ಎರಡು ಮೂರು ದಿನಗಳವರೆಗೂ ಉಳಿದು ಚಾರಣಗಳನ್ನೂ ಕೈಗೊಳ್ಳಬಹುದು. ಅಮೆರಿಕಕ್ಕೆ, ಅದರಲ್ಲಿಯೂ ಕ್ಯಾಲಿಫೋರ್ನಿಯಾ ರಾಜ್ಯಕ್ಕೆ ಹೋದವರು ನೋಡಲೇಬೇಕಾದ ಸ್ಥಳವಿದು.

ಪ್ರತಿಕ್ರಿಯಿಸಿ: feedback@sudha.co.in